ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಯರಗೇರಾ-584133, ರಾಯಚೂರು, ಕರ್ನಾಟಕ, ಭಾರತ

Office No. +919141030953 ಪರೀಕ್ಷಾ ವಿಭಾಗ E-mail: registrarrur@gmail.com

ಕ್ರ.ಸಂ: ರಾವಿರಾ/ಪರೀಕ್ಷಾ/ಯು.ಜಿ-I&II/2023-24/293 ದಿನಾಂಕ:11.08.2023

## ಸುತ್ತೋಲೆ

**ವಿಷಯ:** ರಾಯಚೂರು ವಿಶ್ವವಿದ್ಯಾಲಯದ ಪರೀಕ್ಷಾ ಹಾಗೂ ಇನ್ನಿತರ ಕಾರ್ಯಗಳಿಗೆ ಪ್ರಾಧ್ಯಾಪಕರುಗಳ ಜೇಷ್ಠತಾ ಪಟ್ಟಿಯನ್ನು ಪರಿಶೀಲಿಸುವ ಕುರಿತು.

*****

ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ರಾಯಚೂರು ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವಂತಹ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳ ಎಲ್ಲಾ ಪದವಿ ಕಾಲೇಜಿನ ಪ್ರಾಧ್ಯಾಪಕರುಗಳಿಗೆ ತಿಳಿಪಡಿಸುವುದೇನೆಂದರೆ, ತಮ್ಮ ಕಾಲೇಜಿನಿಂದ ಸಲ್ಲಿಸಿರುವ ಮತ್ತು ವಿಶ್ವವಿದ್ಯಾಲಯದ ಡೇಟಾಬೇಸ್‌ನಲ್ಲಿ ನಮೂದಾಗಿರುವ ಪ್ರಾಧ್ಯಾಪಕರುಗಳ ಜೇಷ್ಠತೆ ಪಟ್ಟಿಯನ್ನು ಗೂಗಲ್ ಶೀಟ್‌ನಲ್ಲಿ ನೀಡಲಾಗಿದೆ. ಪ್ರಾಧ್ಯಾಪಕರುಗಳ ಪಟ್ಟಿಯನ್ನು ಪರಿಶೀಲಿಸಿ, ಯಾವುದಾದರು ಮಾಹಿತಿ ತಪ್ಪಿದಲ್ಲಿ ಅಥವಾ ಬದಲಾವಣೆ ಇದ್ದಲ್ಲಿ ಅಥವಾ ಸೇರ್ಪಡೆ ಇದ್ದಲ್ಲಿ ಅಥವಾ ವರ್ಗಾವಣೆಯಾದ ಪ್ರಾಧ್ಯಾಪಕರುಗಳ ಮಾಹಿತಿಯನ್ನು ಪ್ರಾಂಶುಪಾಲರುಗಳ ಇ-ಮೇಲ್‌ಗೆ ಕಳುಹಿಸಿದ ಗೂಗಲ್ ಶೀಟ್‌ನಲ್ಲಿರುವ ಪಟ್ಟಿಯನ್ನು ದಿನಾಂಕ 21.08.2023ರ ಒಳಗೆ ನವೀಕರಿಸಿ ಇ-ಮೇಲ್ ಮುಖಾಂತರ Approved List ಎಂದು ನಮೂದಿಸಿ ಕಳುಹಿಸಿ ಕೊಡಬೇಕಾಗಿ ಈ ಮೂಲಕ ಸೂಚಿಸಲಾಗಿದೆ.

**ಸೂಚನೆಗಳು :**

1. ಪಟ್ಟಿಯನ್ನು ನವೀಕರಿಸಿ Approved List ಎಂದು ನಮೂದಿಸಿ ಇ-ಮೇಲ್ ಮುಖಾಂತರ ಕಳುಹಿಸತಕ್ಕದ್ದು.
2. ನಿಗದಿತ ದಿನಾಂಕದೊಳಗೆ ಸಲ್ಲಿಸಿದ ಪ್ರಾಧ್ಯಾಪಕರುಗಳ ಪಟ್ಟಿಯನ್ನು ಮಾತ್ರ ವಿಶ್ವವಿದ್ಯಾಲಯ ಪರಿಗಣನೆಗೆ ತೆಗೆದುಕೊಳ್ಳುವುದು.
3. Approved List ನಲ್ಲಿರುವ ಪ್ರಾಧ್ಯಾಪಕರುಗಳನ್ನು ಮಾತ್ರ ವಿಶ್ವವಿದ್ಯಾಲಯ ಪರೀಕ್ಷಾ ಹಾಗೂ ಇನ್ನಿತರ ಕಾರ್ಯಗಳಿಗೆ ಜೇಷ್ಠತ ಆಧಾರದ ಮೇಲೆ ನಿಯೋಜಿಸಲಾಗುವುದು.
4. ತಪ್ಪಾದ ಮಾಹಿತಿಯನ್ನು ಒದಗಿಸಿರುವ ಸಂದರ್ಭದಲ್ಲಿ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿದ್ದು ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು.
5. ನಿಗದಿತ ದಿನಾಂಕ ಮುಗಿದ ನಂತರ ಗೂಗಲ್ ಶೀಟ್‌ನ ಸ್ವೀಕೃತಿಯನ್ನು ಸ್ಥಗಿತಗೊಳಿಸಲಾಗುವುದು.

11/08/23

(ಪ್ರೊ. ಯರಿಸ್ವಾಮಿ.ಎಂ)
ಕುಲಸಚಿವರು (ಮೌಲ್ಯಮಾಪನ)
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

ಪ್ರತಿಯನ್ನು :

1. ಮಾನ್ಯ ಕುಲಪತಿಗಳು ಕಾರ್ಯದರ್ಶಿಗಳು/ ಮಾನ್ಯ ಕುಲಸಚಿವರ ಆಪ್ತ ಸಹಾಯಕ ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
2. ಕುಲಸಚಿವರು ಮೌಲ್ಯಮಾಪನ ಆಪ್ತಕಾರ್ಯದರ್ಶಿ ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
3. ಕಚೇರಿ ಪ್ರತಿ.